ಓದಿದವರು. ನಾನು ಕೂಡ ಅಲ್ಲಿಗೆ ಹೋಗಬೇಕೆಂದು ನಿರೀಕ್ಷಿಸಿದ್ದರು. ಸರಿ ಹೋಗುತ್ತೇನೆ ಅಂದೆ. ನಾನು ಚಿತ್ರಕಾರನಾಗಿದ್ದರಿಂದ ವಾಸ್ತುಶಿಲ್ಪಿಯಾಗಬೇಕು ಅಂದುಕೊಂಡಿದ್ದರು. ಅದು ಎಲ್ಲರಿಗೂ ಒಪ್ಪಿತವಾಗಿತ್ತು. ಯೂನಿವರ್ಸಿಟಿಗೆ ಹೋದೆ, ಆದರೆ ಮಧ್ಯದಲ್ಲೇ ಚಿತ್ರಕಲೆಯನ್ನು ಕೈಬಿಟ್ಟು ಕಾದಂಬರಿಗಳನ್ನು ಬರೆಯಲಾರಂಭಿಸಿದೆ.

**◆ ನೀವು ಬಿಡುವ ನಿರ್ಧಾರ ಮಾಡುವ ಹೊತ್ತಿಗೆ ಮೊದಲ ಕಾದಂಬರಿಯ ಬಗ್ಗೆ ಯೋಚಿಸಿದ್ದಿರಾ? ಅದಕ್ಕಾಗಿ ಆ ನಿರ್ಧಾರ ಕೈಗೊಂಡಿರಾ?**

ನನಗೆ ನೆನಪಿರುವ ಮಟ್ಟಿಗೆ ಏನು ಬರೆಯಬೇಕು ಅಂತ ಗೊತ್ತಾಗುವುದಕ್ಕೂ ಮೊದಲೇ ಕಾದಂಬರಿಕಾರನಾಗಬೇಕು ಅಂತ ನಿರ್ಧರಿಸಿದ್ದೆ. ಬರೆಯಲು ಶುರುಮಾಡಿದಾಗ ಎರಡು ಮೂರು ಸಲ ಏನೋ ಬರೆಯಲು ಹೋಗಿ ಬಿಟ್ಟಿದ್ದೆ. ಆಗ ಬರೆದ ಟಿಪ್ಪಣಿ ಪುಸ್ತಕಗಳು ಈಗಲೂ ಇವೆ. ಆಮೇಲೆ ಆರು ತಿಂಗಳ ಅನಂತರ 'ಸೆವ್ದೆಟ್ ಬೇ ಅಂಡ್ ಹಿಸ್ ಸನ್ಸ್' ಕಾದಂಬರಿ ಬರೆದೆ. ಅದು ಪ್ರಕಟವಾಯಿತು.

**◆ ಅದು ಇಂಗ್ಲಿಷಿಗೆ ಅನುವಾದವಾಗಿಲ್ಲ.**

ಅದು 'ಫಾರ್ಸೈಟ್ ಸಾಗ' ಅಥವಾ ಥಾಮಸ್ ಮನ್‌ನ 'ಬುಡೆನ್‌ಬ್ರೂಕ್ಸ್' ತರಹದ ಕುಟುಂಬ ಕಥಾನಕ. ಅದನ್ನು ಬರೆದ ಮೇಲೆ ಹತ್ತೊಂಬತ್ತನೆಯ ಶತಮಾನದ ರೀತಿಯ ಕಾದಂಬರಿಯನ್ನು ಬರೆಯಬಾರದಿತ್ತು ಅನ್ನಿಸಿತು. ಅದನ್ನು ಬರೆದ ಬಗ್ಗೆ ಬೇಸರವಾಯಿತು. ಯಾಕೆಂದರೆ, ಇಪ್ಪತ್ತೈದು ಅಥವಾ ಇಪ್ಪತ್ತಾರನೆಯ ವಯಸ್ಸಿಗೆ ನಾನೊಬ್ಬ ಆಧುನಿಕ ಬರಹಗಾರನಾಗಬೇಕೆಂದು ನನ್ನ ಮೇಲೆ ಒತ್ತಡ ಹೇರಿಕೊಂಡಿದ್ದೆ. ಅದು ಅಂತಿಮವಾಗಿ ಪ್ರಕಟವಾಗುವ ಹೊತ್ತಿಗೆ ನನಗೆ ಮೂವತ್ತು ವರ್ಷ. ಅಷ್ಟು ಹೊತ್ತಿಗೆ ಬರವಣಿಗೆಯಲ್ಲಿ ಸಾಕಷ್ಟು ಪ್ರಯೋಗಶೀಲನಾಗಿದ್ದೆ.

**ಮಲಗುವ ಜಾಗ ಅಥವಾ ನಿಮ್ಮ ಸಂಗಾತಿಯೊಂದಿಗಿರುವ ಜಾಗ ಮತ್ತು ಬರೆಯುವ ಜಾಗ ಬೇರೆಯಾಗಿರಬೇಕು ಎಂದು ನನಗೆ ಯಾವಾಗಲೂ ಅನ್ನಿಸುತ್ತದೆ. ಕೌಟುಂಬಿಕ ಕೆಲಸಗಳು ಮತ್ತು ವಿವರಗಳು ಕಾಲ್ಪನಿಕತೆಯನ್ನು ಕೊಲ್ಲುತ್ತವೆ. ನನ್ನೊಳಗಿನ ಶಕ್ತಿಯನ್ನು ಕೊಲ್ಲುತ್ತವೆ.**

